# ವಿವೇಕಾನಂದರ ನವ್ಯವೇದಾಂತ

ಡಾ. ಹೆಚ್. ರಾಮಚಂದ್ರಸ್ವಾಮಿ

*ವೇದಾಂತದ ಸಾರ್ವತ್ರಿಕ ಆಯಾಮವನ್ನು ಗುರುತಿಸಿ ಅವರ ನಿತ್ಯಸತ್ಯಗಳನ್ನು ಸಾಮಾನ್ಯನಿಗೆ ಹತ್ತಿರವಾಗಿಸಿದ ಕೀರ್ತಿ ಸ್ವಾಮಿ ವಿವೇಕಾನಂದರದು. ಸ್ವಾಮಿ ವಿವೇಕಾನಂದರ ಈ ಅಭೂತಪೂರ್ವ ಪ್ರಯತ್ನದ ಒಂದು ಸಂಕ್ಷಿಪ್ತ ಪರಿಚಯವನ್ನು ನೀಡಿರುವ ಪ್ರೊ.ಹೆಚ್. ರಾಮಚಂದ್ರಸ್ವಾಮಿ ಅವರು ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕರಾಗಿದ್ದಾರೆ.*

**ಸ್ವಾ**ಮಿ ವಿವೇಕಾನಂದರು ತಮ್ಮ ಆಳ ಅಧ್ಯಯನ ಚಿಂತನೆಗಳ ಮೂಲಕವೂ ಆಧ್ಯಾತ್ಮಿಕ ಅಂತರ್ದೃಷ್ಟಿಯ ಮೂಲಕವೂ ವೈಜ್ಞಾನಿಕ ದೃಷ್ಟಿಗೆ ಹೊಂದಿಕೆಯಾಗುವಂತೆ, ಮತ್ತು ಆಧುನಿಕ ಆವಶ್ಯಕತೆಗೆ ಅನುಗುಣವಾಗುವಂತೆ ವೇದಾಂತಕ್ಕೆ ಹೊಸ ರೀತಿಯ ವ್ಯಾಖ್ಯಾನವನ್ನು ನೀಡಿದರು. ವಿಶೇಷವಾಗಿ ಈ ಹೊಸ ವೇದಾಂತವನ್ನು ಅವರು ನೀಡಿದುದು ಪಾಶ್ಚಾತ್ಯರಿಗೆ. ಅವರೇ ಹೇಳಿದ್ದಾರೆ, "*ಬುದ್ಧನು ಪ್ರಾಚ್ಯರಿಗೆ ನೀಡುವ ಸಂದೇಶವೊಂದಿತ್ತು. ಹಾಗೆಯೇ ಪಾಶ್ಚಾತ್ಯರಿಗೆ ನಾನು ನೀಡುವ ಸಂದೇಶವೊಂದಿದೆ*" ಎಂದು.

ಪಾಶ್ಚಾತ್ಯರು ಬಾಹ್ಯಪ್ರಪಂಚದಲ್ಲಿ ನಡೆಸುತ್ತಿದ್ದ ಸತ್ಯಾನ್ವೇಷಣೆಯನ್ನೂ ಆನಂದಕ್ಕಾಗಿ, ಸಫಲತೆಗಾಗಿ ಮಾಡುತ್ತಿದ್ದ ಹುಡುಕಾಟವನ್ನೂ ಪರಮಾತ್ಮನ ಅಸ್ತಿತ್ವಕ್ಕಾಗಿ ಅರಸುವಿಕೆಯನ್ನೂ ನಿಮ್ಮ ಅಂತರಂಗದ ಆಳದಲ್ಲಿಯೇ ನಡೆಸಿ ಎಂದು ವಿವೇಕಾನಂದರು ಅವರಿಗೆ ನಿರ್ದೇಶಿಸಿದರು. ಗರ್ಲ್ಟರ ಒಂದು ಉಪನ್ಯಾಸದಲ್ಲಿ ಹೇಳುತ್ತಾರೆ : "ನಿಮ್ಮ ಅಂತರಾತ್ಮನಲ್ಲಿರುವ ದೇವರೆ ತನ್ನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವಂತೆ ನಿಮ್ಮನ್ನು ಪ್ರಚೋದಿಸುತ್ತಿರುವುದು. ಅಲ್ಲಿ ಇಲ್ಲಿ ಬಹಳ ಹುಡುಕಾಡಿದ ಮೇಲೆ, ದೇವಸ್ಥಾನ, ಚರ್ಚು, ಭೂಮಿ, ಸ್ವರ್ಗ, ಇವುಗಳಲ್ಲೆಲ್ಲ ಹುಡುಕಿದ ಮೇಲೆ, ಒಂದು ಸುತ್ತನ್ನು ಹಾಕಿಕೊಂಡು ಕೊನೆಗೆ ಹೊರಟ ಸ್ಥಳಕ್ಕೆ ಪುನಃ ಬರುವಿರಿ. ನೀವು ಪ್ರಪಂಚದಲ್ಲೆಲ್ಲಾ ಯಾರನ್ನು ಹುಡುಕುತ್ತಿದ್ದಿರೊ, ಯಾರಿಗಾಗಿ ನೀವು ಚರ್ಚು-ದೇವಸ್ಥಾನಗಳಲ್ಲಿ ಅಳುತ್ತಾ ಪ್ರಾರ್ಥಿಸುತ್ತಿದ್ದಿರೊ, ಯಾರನ್ನು ಮುಗಿಲಿನಿಂದ ಆವೃತವಾದ ರಹಸ್ಯತಮ ವಸ್ತುವೆಂದು ಭಾವಿಸಿದ್ದಿರೊ, ಅದು ಅತ್ಯಂತ ಹತ್ತಿರದಲ್ಲಿದೆ, ಅದೇ ನಿಮ್ಮಾತ್ಮ, ಅದೇ ನಿಮ್ಮ ಬಾಳು, ದೇಹ ಮತ್ತು ಜೀವನದ ಸತ್ಯ; ಅದೇ ನಿಮ್ಮ ಸ್ವರೂಪ. ಅದನ್ನು ಸಾಧಿಸಿ ವ್ಯಕ್ತಗೊಳಿಸಿ. ನೀವು ಪರಿಶುದ್ಧರಾಗುವುದಲ್ಲ, ನೀವು ಆಗಲೇ ಪರಿಶುದ್ಧರು. ನೀವು ಪರಿಪೂರ್ಣರಾಗುವುದಲ್ಲ, ಏಕೆಂದರೆ ಈಗಾಗಲೆ ನೀವು ಪರಿಪೂರ್ಣರು. ಪ್ರಕೃತಿಯು ಅತ್ತ ಕಡೆ ಇರುವ ಸತ್ಯವನ್ನು ಮುಚ್ಚಿದ ತೆರೆಯಂತೆ. ನೀವು ಯೋಚಿಸುವ ಪ್ರತಿಯೊಂದು ಒಳ್ಳೆಯ ಆಲೋಚನೆಯೂ, ಮಾಡುವ ಪ್ರತಿಯೊಂದು ಒಳ್ಳೆಯ ಕೆಲಸವೂ, ಆ ತೆರೆಯನ್ನು ಹರಿದುಹಾಕಿದಂತೆ. ಒಂದೆ ಇರುವ ಪಾವಿತ್ರ್ಯ, ಅನಂತತೆ, ದಿವ್ಯತೆ ಹೆಚ್ಚು ಹೆಚ್ಚು ವ್ಯಕ್ತವಾಗುತ್ತಾ ಬರುವುವು." (**ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂಪುಟ ೨, ಪು. ೨೪**).


> **ಅನಂತ ಪಾವಿತ್ರ್ಯ, ಸ್ವಾತಂತ್ರ್ಯ, ಪ್ರೇಮ ಮತ್ತು ಶಕ್ತಿಗಳೆಲ್ಲ ಆಗಲೇ ನಿಮ್ಮಲ್ಲಿರುವುವು.**
>
> *—ಸ್ವಾಮಿ ವಿವೇಕಾನಂದ*

ಆತ್ಮವು ಅನಂತವಾದದ್ದು, ಚಿರಂತನವಾದದ್ದು ಎಂಬ ಈ ಬೋಧನೆಯೇ ವಿವೇಕಾನಂದರು ಪಾಶ್ಚಾತ್ಯರಿಗೆ ಕೊಟ್ಟ ಸಂದೇಶದ ಸಾರ ಎಂಬುದರಲ್ಲಿ ಸಂಶಯವಿಲ್ಲ. ಇವರ ಮೇಲೆಯೇ ಉಳಿದೆಲ್ಲವೂ ನಿಂತಿರುವುದು. ಆದರೂ ಪ್ರಶ್ನಿಸುವ ಪಾಶ್ಚಾತ್ಯ ಮನಸ್ಸಿಗೆ ಹೇಳಬೇಕಾದುದು ಬೇಕಾದಷ್ಟಿದೆ. ಮನುಷ್ಯ ತನ್ನೊಳಗೆ ತಾನು ಹೀಗೆ ನೋಡಿಕೊಳ್ಳತೊಡಗಿದರೆ, ಪ್ರಪಂಚವನ್ನು ಹೇಗೆ ನೋಡುವನು? ದೇವರನ್ನು ಹೇಗೆ ಪರಿಭಾವಿಸುವನು? ಅಲ್ಲದೆ, ನೀವು ಹೇಳಿದ ಆವರಣ ಎಲ್ಲಿಂದ ಬಂತು? ಅದನ್ನು ಹರಿದು ಹಾಕಬೇಕಾದರೂ ಏಕೆ? ಅಂತಿಮ ಸತ್ಯ ಈ ಕ್ಷಣ, ಇಲ್ಲೇ ಇರುವ ನಿರಪೇಕ್ಷ ಏಕತ್ವ ಮತ್ತು ಅದೇ ನಾನು ಎಂದಾದರೆ, ದೇಶ, ಕಾಲ, ಕಾರಣ, ನಾಮರೂಪಗಳು, ಅನ್ವೇಷಣೆ, ಹೋರಾಟ, ಯಾತನೆ—ಒಟ್ಟಿನಲ್ಲಿ ಈ ನಿರಾಕರಿಸಲಾಗದ, ಕಣ್ಣಿಗೆ ರಾಚುವಂತೆ ಅನುಭವಕ್ಕೆ ಬರುತ್ತಿರುವ ಈ ವಿಶ್ವವಾದರೂ ಎಲ್ಲಿಂದ ಬಂತು? ಈ ಪ್ರಶ್ನೆಯನ್ನು ಕೇಳದಿದ್ದ ಸಭೆಯೇ ಇರಲಿಲ್ಲ. ಇದನ್ನು ನಿರೀಕ್ಷಿಸಿಯೇ ಸ್ವಾಮೀಜಿ ತುಂಬ ಕಷ್ಟಪಟ್ಟು, ಲಂಡನ್ನಿನಲ್ಲಿ ಅದ್ವೈತದಲ್ಲಿ ಮಾಯೆಯ ಸ್ಥಾನ ಎಂಬ ವಿಷಯವಾಗಿಯೇ ಮೂರು ಉಪನ್ಯಾಸಗಳನ್ನು ಕೊಟ್ಟು, ವೇದಾಂತದ ನಿಲುವನ್ನು ವಿವರಿಸಿದರು.

ಮಾಯಾವಾದವೆ ವೇದಾಂತದ ಒಂದು ಆಧಾರಸ್ತಂಭ ಎಂದರು ಸ್ವಾಮೀಜಿ. ಅದು ಪಾಶ್ಚಾತ್ಯರಿಗೆ ಭಾರತೀಯ

ಚಿಂತನಾಲಹರಿಯನ್ನು ಅರ್ಥಮಾಡಿಕೊಳ್ಳುವುದಕ್ಕೆ ಇರುವ ದೊಡ್ಡ ಅಡ್ಡಿಯೂ ಹೌದು. ತಮ್ಮ ಪರಂಪರೆಯಿಂದಲೂ ಪ್ರವೃತ್ತಿಯಿಂದಲೂ ಪ್ರಾಪಂಚಿಕರಾದ ಪಾಶ್ಚಾತ್ಯರ ಕನಸು ಈ ಭೂಮಿಯ ಮೇಲಿನ ಸ್ವರ್ಗವೆಂದಾಗಿರುವಾಗ, ಈ ಪ್ರಪಂಚ ಭ್ರಮಾತ್ಮಕ ಎಂಬುದನ್ನು ಅವರು ಸ್ವೀಕರಿಸುವುದೆಂತು? ಪಾಶ್ಚಾತ್ಯ ಜನಸಾಮಾನ್ಯರಿಗೆ ಅದು ಹುಚ್ಚುತನ ಎಂದೆನಿಸದೆ ಇರದು. ಸಭಿಕನು, ಪ್ರಪಂಚ ಭ್ರಮೆ ಎಂದೊಡನೆ ಹತ್ತಿರದ ಮೇಜನ್ನು ತನ್ನ ಬೆರಳಿನಿಂದ ಬಡಿದು ಅದರ ಗಟ್ಟಿತನವನ್ನು ತೋರಿಸದೆ ಇರಲಾರ. ಮೇಜಿನಂತೆಯೇ ಅವನ ಬೆರಳೂ ಭ್ರಮೆ, ಅದರ ಸ್ಪರ್ಶಕ್ಕೆ ತೋರುವ ಗಟ್ಟಿತನವೂ ಭ್ರಮೆ ಎಂದು ಅವನಿಗೆ ಅನ್ನಿಸದು. ಹಾಗೇನಾದರೂ ಹೇಳಿದರೆ ಅದನ್ನು ತನಗೆ ಮಾಡಿದ ಅವಮಾನ ಎಂದು ಅವನು ತಿಳಿದಾನು.

ಪಾಶ್ಚಾತ್ಯರು ಮಾಯೆಯನ್ನು ಅಪಾರ್ಥ ಮಾಡಿಕೊಳ್ಳುವುದನ್ನು ವಿವೇಕಾನಂದರು ಒಂದೇ ಏಟಿಗೆ ತಪ್ಪಿಸಿಬಿಟ್ಟರು. ಅವರು ಭ್ರಮೆ ಎಂಬ ಪದವನ್ನೆ ಬಳಸಲಿಲ್ಲ. ಲಂಡನ್ ಉಪನ್ಯಾಸವೊಂದರಲ್ಲಿ ಅವರು ಹೀಗೆಂದರು : "ವೇದಾಂತದಲ್ಲಿ ಬರುವ ಪೂರ್ಣರೂಪವನ್ನು ಪಡೆದ ಮಾಯಾಭಾವನೆಯು ಭಾವಸತ್ತಾವಾದವೂ ಅಲ್ಲ, ವಸ್ತುಸತ್ತಾವಾದವೂ ಅಲ್ಲ. ಅದೊಂದು ಸಿದ್ಧಾಂತವೇ ಅಲ್ಲ. ಅದೊಂದು ವಾಸ್ತವ ಸ್ಥಿತಿಯ ನಿರೂಪಣೆ ಅಷ್ಟೆ. ನಾವೇನಾಗಿರುವೆವೊ, ಸುತ್ತಲೂ ಏನನ್ನು ನೋಡುತ್ತಿರುವೆವೊ ಅದರ ನಿರೂಪಣೆ." (ಕೃತಿಶ್ರೇಣಿ, ೨.೩೧) ಹಾಗಾದರೆ ಈ ಪ್ರಪಂಚಕ್ಕೆ ಅಸ್ತಿತ್ವವಿಲ್ಲ ಎಂಬ ಮಾತಿನ ಅರ್ಥವಾದರೂ ಏನು? "ಎಂದರೆ ಅದಕ್ಕೆ ಕೇವಲವಾದ ಅಸ್ತಿತ್ವವಿಲ್ಲ ಎಂದು ಅರ್ಥ. ನನ್ನ, ನಿಮ್ಮ ಮತ್ತು ಪ್ರತಿಯೊಬ್ಬರ ಮನಸ್ಸಿನ ದೃಷ್ಟಿಯಿಂದ ಈ ಜಗತ್ತು ಇದೆ. ನಾವು ಪಂಚೇಂದ್ರಿಯಗಳ ಮೂಲಕ ಜಗತ್ತನ್ನು ನೋಡುತ್ತಿರುವೆವು. ನಮಗೆ ಇನ್ನೊಂದು ಇಂದ್ರಿಯವಿದ್ದಿದ್ದರೆ ಜಗತ್ತಿನಲ್ಲಿ ನಾವು ಇನ್ನೂ ಹೆಚ್ಚು ಹೆಚ್ಚಾದುದನ್ನು ನೋಡುಹುದಾಗಿತ್ತು. ನಮಗೆ ಮತ್ತೊಂದು ಇಂದ್ರಿಯವಿದ್ದಿದ್ದರೆ ಜಗತ್ತು ಮತ್ತೂ ಬೇರೆಯಾಗಿ ಕಾಣುತ್ತಿತ್ತು. ಆದಕಾರಣ ಜಗತ್ತಿಗೆ ನಿಜವಾದ ಅಸ್ತಿತ್ವವಿಲ್ಲ. ಜಗತ್ತು ಅವಿಕಾರಿಯಲ್ಲ, ಅಚಲವಲ್ಲ, ಅನಂತವಲ್ಲ. ಅದನ್ನು ಇಲ್ಲವೆಂತಲೂ ಹೇಳಲಾಗುವುದಿಲ್ಲ. ಅದು ಇದೆ; ಅದರ ಮೂಲಕ ನಾವು ಕೆಲಸ ಮಾಡಬೇಕಾಗಿದೆ. ಅದು ಅಸ್ತಿ-ನಾಸ್ತಿಗಳ ಒಂದು ಮಿಶ್ರಣ" (ಕೃತಿಶ್ರೇಣಿ, ೨. ೩೧-೩೨). ಇದು ಪರಿಸ್ಥಿತಿಯನ್ನು ಸ್ವಲ್ಪಮಟ್ಟಿಗೆ ನಿಭಾಯಿಸಿತು. ಮುಂದುವರೆದು ವಿವೇಕಾನಂದರು, ಈ ಅಸ್ತಿತ್ವ-ಅನಸ್ತಿತ್ವಗಳ ತಾರ್ಕಿಕ ವಿರೋಧಾಭಾಸವು ಜೀವನದ ಪ್ರತಿಯೊಂದು ಅಂಶದಲ್ಲಿಯೂ ಹಾಸುಹೊಕ್ಕಾಗಿ, ತಾರುಣ್ಯದ ಸುವರ್ಣ ನಿರೀಕ್ಷೆಗಳಿಂದ ಹಿಡಿದು ಅನಿವಾರ್ಯವಾದ ಸಾವಿನವರೆಗೂ ಮುಂದುವರೆಯುತ್ತದೆ ಎಂಬುದನ್ನು ಬೆರಳಿಟ್ಟು ತೋರಿಸಿದರು.



ನಮ್ಮ ಬುದ್ಧಿ, ನಮ್ಮ ಜ್ಞಾನ, ನಮ್ಮ ಜೀವನ, ನಮ್ಮ ಜೀವನದ ಘಟನೆಗಳು—ಇವೆಲ್ಲವುಗಳಲ್ಲಿಯೂ ಈ ಪ್ರಚಂಡ ವಿರೋಧ ನಮ್ಮನ್ನು ಸುತ್ತಲೂ ಎದುರಿಸುತ್ತದೆ. —ಸ್ವಾಮಿ ವಿವೇಕಾನಂದ.

ಇಪ್ಪತ್ತನೆಯ ಶತಮಾನದ ಹೊಸ್ತಿಲಿನಲ್ಲಿದ್ದ ಇಂಗ್ಲೆಂಡ್ ಅಮೆರಿಕಗಳಿಗೆ ಇದು ಪಾಷಂಡತನವಾಗಿ ತೋರಿರಬೇಕು. ವಿಕಾಸವಾದದ ಮೇಲಣ ನಂಬಿಕೆ ಜನರನ್ನು ಆಗ ಹುಚ್ಚೆಬ್ಬಿಸಿತ್ತು. ವಿದ್ಯಾವಂತರಲ್ಲಿ ಆಗ ಮಾನವ ವಿಕಾಸ ಈ ಭೂಮಿಯ ಮೇಲೆ ಸ್ವರ್ಗವನ್ನೇ ಸೃಷ್ಟಿಸುತ್ತದೆ, ಕೇಡನ್ನು ಸಂಪೂರ್ಣವಾಗಿ ಇಲ್ಲವಾಗಿಸುತ್ತದೆ ಎಂಬ ಶ್ರದ್ಧೆ ನೆಲೆಗೊಂಡಿತ್ತು. ಇದರಲ್ಲಿ ಅಭಿಪ್ರಾಯಭೇದವೇ ಇರಲಿಲ್ಲ. ಭಿನ್ನಮತವೇನಿದ್ದರೂ ಕೇಡಿನ ನಿರ್ಮೂಲನವನ್ನು ಆಗುಮಾಡುವ ವಿಧಾನದಲ್ಲಿ; ಅದೊಂದು ತಾಂತ್ರಿಕ ಸಂಗತಿಯಷ್ಟೆ.

ಈ ಪ್ರಚಂಡ ಆಶಾವಾದದ ನಡುವೆ ವಿವೇಕಾನಂದರ ಪ್ರಜ್ಞಾಪೂರ್ಣವಾಣಿ ಮೊಳಗಿಯೇ ಮೊಳಗಿತು : "ಈ ಪ್ರಪಂಚ ಒಳ್ಳೆಯದು ಮತ್ತು ಕೆಟ್ಟದ್ದು, ಸುಖ ಮತ್ತು ದುಃಖ—ಇವುಗಳ ಮಿಶ್ರಣ. ಒಂದನ್ನು ಹೆಚ್ಚಿಸಿದರೆ ಮತ್ತೊಂದನ್ನೂ ಹೆಚ್ಚಿಸಲೇ

ಬೇಕಾಗುವುದು. ಏರಿಯ ಒಳ್ಳೆಯ ಅಥವಾ ಕೆಟ್ಟ ಪ್ರಪಂಚ ಎಂದಿಗೂ ಇರಲಾರದು. ಈ ಭಾವನೆಯೇ ಪರಸ್ಪರ ವಿರೋಧಿ ಯಾದದ್ದು.... ಕೆಟ್ಟದ್ದನ್ನು ನಿಲ್ಲಿಸಬೇಕಾದರೆ ಒಳ್ಳೆಯದನ್ನು ನಿಲ್ಲಿಸಬೇಕು. ಬೇರೆ ಮಾರ್ಗವೇ ಇಲ್ಲ. ಮರಣವಿಲ್ಲದಂತೆ ಮಾಡಬೇಕಾದರೆ ಜನನವೂ ಇಲ್ಲದಂತೆ ಮಾಡಬೇಕು. ಮರಣ ವಿಲ್ಲದ ಜನನ, ದುಃಖವಿಲ್ಲದ ಸುಖ ಇವು ಅರ್ಥಹೀನ ವಾದುವು. ಇವುಗಳಲ್ಲಿ ಯಾವುದನ್ನೂ ನಾವು ಪ್ರತ್ಯೇಕವಾಗಿ ಪಡೆಯಲಾರೆವು. ಇವೆರಡೂ ಒಂದೇ ವಸ್ತುವಿನ ಬೇರೆ ಬೇರೆ ಅಭಿವ್ಯಕ್ತಿಗಳು" (ಕೃತಿಶ್ರೇಣಿ, ೨.೩೮-೩೯). ಭೂಸ್ವರ್ಗವಾಗ ಲಿರುವ ಈ ಲೋಕಕ್ಕೆ ಇದೆಂತಹ ಅಶುಭ ಪ್ರತೀಕ್ಷೆ, ಎಂದು ಶತ್ರುಮಿತ್ರರುಗಳು ಕೂಡಿಯೇ ಮೂಗು ಮುರಿದರೂ, ವಿವೇಕಾ ನಂದರು ವಾಸ್ತವ ಸಂಗತಿಯನ್ನು ಮತ್ತೆ ಮತ್ತೆ ಜನರ ಮುಂದಿ ಟ್ಟರು.

ಈ ಬೋಧನೆಯ ಧೈರ್ಯವನ್ನು ಏನೆಂದು ಹೇಳೋಣ! ಮಿತಿಮೀರಿದ್ದೆಂದೇ ಹೇಳಬೇಕು. ತಾವು ಪ್ರವಾಹದ ವಿರುದ್ಧ ವಾಗಿ ಹೋಗುತ್ತಿರುವುದು ವಿವೇಕಾನಂದರಿಗೂ ತಿಳಿದಿತ್ತು; ಆದರೆ ಅವರು ಎದೆಗುಂದಲಿಲ್ಲ. ಪಾಶ್ಚಾತ್ಯ ಚಿಂತನಲಹರಿ ಗಳನ್ನು ಅವರು ಸತ್ಯವೆಂಬ ಖಡ್ಗದಿಂದ ಮುಖ-ಮೂತಿ ನೋಡದೆ ಥಳಿಸಿದರು. ಇಂದು ಒಪ್ಪದಿದ್ದರೂ ಮುಂದೆ ಅವ ರನ್ನು ಕಾಯಬಲ್ಲ ನೇರ ವಾಸ್ತವಗಳನ್ನು ಜನರ ಮುಂದೆ ಇಟ್ಟರು.

ಪ್ರಚಲಿತ ಜನೋತ್ಸಾಹಕ್ಕೆ ವಿರುದ್ಧವಾಗಿದ್ದರೂ ವಿವೇಕಾ ನಂದರ ವಾಣಿ ವಿಶಾಲಹೃದಯಿಗಳೂ ಸ್ವಾತಂತ್ರ್ಯಪ್ರೇಮಿಗಳೂ ಸತ್ಯ-ಸಫಲತೆಗಳನ್ನು ಅಪೇಕ್ಷಿಸುವವರೂ ಆದ ಪಾಶ್ಚಾತ್ಯರ ಒಳಮನಸ್ಸನ್ನು ನಾಟಿಯೇ ನಾಟಿತು. ಸತ್ಯ ಸ್ವಾತಂತ್ರ್ಯ ಸಫಲತೆ ಗಾಗಿ ಇಡೀ ಲೋಕವೇ ಹಾತೊರೆಯುತ್ತಿದ್ದ ಸಮಯ ಅದು; ವಿವೇಕಾನಂದರ ವಾಣಿ ಹೋಗಿ ಸ್ಪಂದಿಸಿದ್ದೂ ಅಂತಹ ಹೃದಯಗಳನ್ನೇ. ಅವರು ಉದ್ದೇಶಿಸಿ ನುಡಿದದ್ದೂ ಅಂಥವ ರನ್ನೇ. ಅಂಥವರಿಗೆ ಅವರು ತ್ಯಜಿಸಿ, ಎಲ್ಲವನ್ನೂ ಬಿಟ್ಟುಬಿಡಿ ಎಂದು ಕರೆಕೊಟ್ಟರು.

ಏನು ಹಾಗೆಂದರೆ? ಪ್ರಪಂಚದಲ್ಲಿರುವ ಕೇಡಿಗೆ ಹೆದರಿ ಓಡಿಹೋಗುವುದೆ? ಖಂಡಿತ ಅಲ್ಲ. ಬದಲಿಗೆ, ಸ್ವಾರ್ಥ ವಿಲ್ಲದೆ, ಧೈರ್ಯವಾಗಿ ಲೋಕದ ಕೇಂದ್ರಕ್ಕೇ ನುಗ್ಗಿ, ಅಲ್ಲಿರು ವುದೂ ದೇವರೇ, ಸತ್ಯ ಮಾತ್ರವೇ ಎಂದು ಅರಿತುಕೊಳ್ಳಿ, ಎಂದರು ವಿವೇಕಾನಂದರು. ಲಂಡನ್ನಿನಲ್ಲಿ ಕೊಟ್ಟ ಒಂದು ಉಪನ್ಯಾಸದಲ್ಲಿ ಅವರೆಂದರು: "ವೇದಾಂತವು ನಿಜವಾಗಿ ಜಗತ್ತನ್ನು ತ್ಯಜಿಸುವುದಿಲ್ಲ. ವೇದಾಂತದ ಸಂದೇಶವನ್ನು ಬಿಟ್ಟರೆ ಮತ್ತೆಲ್ಲೂ ತ್ಯಾಗದ ಆದರ್ಶ ಅಷ್ಟು ಉಚ್ಚವರ್ಗಕ್ಕೆ ಏರದು. ಆದರೂ ಅದು ಶುಷ್ಕವಾದ ಆತ್ಮಹಾನಿಕರವಾದ ಸಂದೇಶವನ್ನು ನೀಡುವುದಿಲ್ಲ. ಅದು ನಿಜವಾಗಿ ಜಗತ್ತನ್ನು ದೈವೀದೃಷ್ಟಿಯಿಂದ ನೋಡುತ್ತದೆ. ನಮಗೆ ಹೇಗೆ ತೋರು ತ್ತಿದೆಯೋ, ನಾವು ಹೇಗೆ ಭಾವಿಸುತ್ತಿದ್ದೇವೆಯೋ ಅಂಥ ಜಗತ್ತನ್ನು ತ್ಯಜಿಸಬೇಕು ಮತ್ತು ಜಗತ್ತಿನ ನಿಜವಾದ ಸ್ವರೂಪ ವನ್ನು ತಿಳಿಯಬೇಕು ಎಂದು ಅದು ಬೋಧಿಸುತ್ತದೆ. 'ಅದನ್ನು ದೇವರನ್ನಾಗಿ ಮಾಡು; ಅದು ದೇವರೆ.' ಇದನ್ನೇ ಒಂದು ಪುರಾತನ ಉಪನಿಷತ್ತಿನ ಪ್ರಾರಂಭದಲ್ಲಿ 'ಪ್ರಪಂಚದಲ್ಲಿ ಏನಿರು ವುದೊ ಅದನ್ನೆಲ್ಲ ದೇವರಿಂದ ವ್ಯಾಪಿಸಬೇಕು' ಎಂದು ಹೇಳಿದೆ" (ಕೃತಿಶ್ರೇಣಿ, ೨.೮೩).

> **ನಾವು ಆಸೆಯನ್ನು ತ್ಯಜಿಸಿದರೆ ಆಗ ಮಾತ್ರ ಭಗವಂತನ ಈ ವಿಶ್ವವನ್ನು ನೋಡಿ ಆನಂದಿಸಬಹುದು.**
>
> —ಸ್ವಾಮಿ ವಿವೇಕಾನಂದ

ಇಂಥ ಸತ್ಯಕ್ಕೆ ನಮ್ಮ ಕಣ್ಣು ತೆರೆದಿದ್ದೇ ಆದರೆ, ಈ ಪ್ರಪಂಚದಲ್ಲಿ ಮನುಷ್ಯ ಎದುರಿಸಲಾಗದ ಇರುವ ಸಮಸ್ಯೆ ಯಾವುದೂ ಇರುವುದಿಲ್ಲ; ಇದನ್ನು ಅರಿತವನಿಗೆ ಲೋಕವೇ ಪರಿವರ್ತಿತವಾಗಿಬಿಡುತ್ತದೆ. ನಮ್ಮ ನಡೆ ನುಡಿಗಳೆಲ್ಲವೂ ದೈವೀಕರಣಗೊಂಡರೆ, ಎಲ್ಲ ರೂಪಗಳೂ ದಿವ್ಯರೂಪಗಳಾ ದರೆ, ಈ ಜಗತ್ತು ದುಃಖಮಯವಾಗಿ ಕಾಣದೆ, ಇದೇ ಸ್ವರ್ಗ ದಂತಾಗುವುದು. ಈ ಸ್ವರ್ಗವನ್ನೇ ಅಲ್ಲವೆ ನಾವು ಬಯಸು ತ್ತಿರುವುದು? ಇದು ಉದ್ಭವಿಸುವುದೇ ಆತ್ಮಪರಿವರ್ತನೆ ಯಿಂದ, ನಮ್ಮ ಮನಃಸ್ಥಿತಿಯ ಪರಿವರ್ತನೆಯಿಂದ; ಇದು ಬರುವುದು ನಮ್ಮೊಳಗಿನಿಂದ; ನಮ್ಮ ಹೃದಯದಲ್ಲಿ ಹೊತ್ತಿ ಸಿದ ಹಣತೆಯ ಬೆಳಕಿನಿಂದ.

ಅಂತರಂಗದ ಈ ಬದಲಾವಣೆಯಿಂದ ಸ್ವಾರ್ಥ, ಸೋಮಾರಿತನಗಳು ಪ್ರೇಮ, ಕಾರ್ಯಾಸಕ್ತಿಗಳಾಗಿ ಪರಿವರ್ತನೆ ಹೊಂದುವುವು. ಪಾಶ್ಚಾತ್ಯರ ಕಾರ್ಯಾಸಕ್ತಿಯನ್ನು ಸ್ವಾಮೀಜಿ ಪ್ರೋತ್ಸಾಹಿಸುತ್ತಾರೆ: "ನಾವು ಕೆಲಸ ಮಾಡಬೇಕು. ಭ್ರಾಂತ ಆಸೆ ಗಳಿಂದ ಪ್ರೇರಿತರಾದವರಿಗೆ ಕೆಲಸವೆಂದರೇನು ಗೊತ್ತು? ತಮ್ಮ ಸ್ವಂತ ಉದ್ವೇಗಗಳಿಂದ ಮತ್ತು ಇಂದ್ರಿಯಗಳಿಂದ ಪ್ರೇರಿತ ರಾದವರಿಗೆ ಕೆಲಸದ ರಹಸ್ಯವೇನು ಗೊತ್ತು? ಯಾರು ಸ್ವಂತ ಇಚ್ಛೆಯಿಂದ ಪ್ರೇರಿತರಾಗಿಲ್ಲವೊ, ಸ್ವಾರ್ಥದಿಂದ ಪ್ರೇರಿತ ರಾಗಿಲ್ಲವೊ ಅವರು ಕರ್ಮ ಮಾಡಬಲ್ಲರು. ಯಾರಿಗೆ ಯಾವ ಪ್ರಾಪಂಚಿಕ ಉದ್ದೇಶವೂ ಇಲ್ಲವೊ ಅವರು ಕೆಲಸ ಮಾಡು ವರು. ಕೆಲಸದಿಂದ ಏನನ್ನೂ ಯಾರು ಬಯಸರೊ ಅವರು ಕೆಲಸ ಮಾಡಬಲ್ಲರು.

"ದೇವರನ್ನು ಸರ್ವತ್ರ ನೋಡುತ್ತ ನೀವು ಕೆಲಸ

ಮಾಡಬೇಕು. ನೂರು ವರುಷಗಳವರೆಗೆ ಜೀವಿಸಬೇಕಾದರೆ ಜೀವಿಸಿ; ಪ್ರಪಂಚದ ಸುಖಭೋಗಗಳನ್ನೆಲ್ಲ ಬೇಕಾದರೆ ಪಡೆಯಿರಿ. ಆದರೆ ಎಲ್ಲವನ್ನೂ ದೈವೀ ಸ್ವರೂಪಕ್ಕೆ ತನ್ನಿ, ಪಾವನ ಮಾಡಿ. ಮತ್ತೊಬ್ಬರಿಗೆ ಉಪಯೋಗಕರವಾಗುವಂತಹ ದೀರ್ಘಜೀವನವನ್ನು, ಆನಂದದಿಂದ ಮತ್ತು ಕರ್ಮನಿಷ್ಠೆಯಿಂದ ಕೂಡಿದ ಜೀವನವನ್ನು ಆಶಿಸಿ" **(ಕೃತಿಶ್ರೇಣಿ, ೨. ೮೫, ೮೬)**. ಇವರಲ್ಲಿ ಪ್ರಪಂಚವನ್ನು ಬೈಯುವುದು ಎಲ್ಲಿದೆ, ಬಿಟ್ಟೋಡುವುದು ಎಲ್ಲಿದೆ? ಬದಲಿಗೆ, ಬದುಕನ್ನು ಸ್ವೀಕರಿಸಿ, ಸಂತೋಷದಿಂದ ತನ್ನೊಳಗಿನ ಅತ್ಯುತ್ತಮವಾದುದನ್ನು ಇಡೀ ಮಾನವಜನಾಂಗಕ್ಕೆ ಕೊಟ್ಟುಕೊಳ್ಳುವುದು ಇದೆ. ಇಂತಹ ವೇದಾಂತ ಸ್ವಾಮಿ ವಿವೇಕಾನಂದರ ಒಂದು ನೂತನ ಕೊಡುಗೆಯಲ್ಲವೆ ಮತ್ತೇನು?

ವೇದಾಂತಕ್ಕೆ ಸಂಬಂಧಿಸಿದಂತೆ ಸ್ವಾಮಿ ವಿವೇಕಾನಂದರ ಇನ್ನೊಂದು ಮುಖ್ಯ ಸಂದೇಶ ಆಂತರಿಕ ದಿವ್ಯತೆಯ ಅಭಿವ್ಯಕ್ತಿ. ಅವರು ಒಂದು ಕಡೆ ಹೇಳುತ್ತಾರೆ: "ನನಗೆ ವಯಸ್ಸಾದಂತೆಲ್ಲ ಪೌರುಷತ್ವದಲ್ಲಿಯೇ ಎಲ್ಲವೂ ಅಡಗಿದೆ ಎಂದು ನನಗನಿಸುತ್ತಿದೆ. ಇದು ನನ್ನ ಹೊಸ ಸಂದೇಶ." ಈ ಮಾತಿಗೆ ಸ್ವಾಮೀಜಿಯ ಅರ್ಥ ಗಹನವಾದುದು. ಈ ಪೌರುಷವು ಆತ್ಮದಿಂದ ಹೊರಹೊಮ್ಮಿ ದೇಹ, ಇಂದ್ರಿಯಗಳು, ಮನಸ್ಸು, ಹೃದಯ, ಇಚ್ಛೆ ಎಲ್ಲವನ್ನೂ ಆವರಿಸಿಕೊಳ್ಳುವಂಥದು. ಆತ್ಮನಲ್ಲಿಯೇ ನೆಲೆಗೊಂಡು ಆತ್ಮನಲ್ಲಿಯೇ ಆನಂದಿತನಾಗಿದ್ದು, ರಾಗದ್ವೇಷಗಳಿಲ್ಲದೆ, ನಿರ್ಭಯವಾಗಿ ಮಾನವಸೇವೆಯಲ್ಲಿ ತೊಡಗಿಸುವಂಥದು. ಮನುಷ್ಯನಿಗೆ ಶೀಲದ ಬಲ ಇಲ್ಲದಿದ್ದರೆ ಬೋಧನೆ, ಸಿದ್ಧಾಂತ, ಶ್ರದ್ಧೆ, ಅನುಷ್ಠಾನಗಳಾವುವೂ ಏನೂ ಮಾಡಲಾರವು.

ಈ ದೃಢನಂಬಿಕೆ, ಜೊತೆಗೆ ಉಜ್ವಲವಾದ ಅಹೈತುಕ ಪ್ರೇಮ—ಇವುಗಳಿಗೆ ಒತ್ತುಕೊಡಲು ಬಯಸಿದರು ವಿವೇಕಾನಂದರು. ಅವರ ಕ್ಯಾಲಿಫೋರ್ನಿಯಾ ಉಪನ್ಯಾಸಗಳೆಲ್ಲ ಮಾನವ ತನ್ನ ದಿವ್ಯತೆಯನ್ನು ತಡಮಾಡದೆ ಈಗಲೇ ಸಾಕ್ಷಾತ್ಕರಿಸಿಕೊಳ್ಳಬೇಕು ಎಂಬ ಒತ್ತಾಯದಿಂದ ಕೂಡಿದ್ದವು.

ಸಮಸ್ತ ಸ್ತ್ರೀಪುರುಷರೂ ತಾವೇ ಅನಂತಚೇತನರೆಂಬುದನ್ನು ಅರಿಯಬೇಕೆಂಬುದೇ ವಿವೇಕಾನಂದರ ಅಪೇಕ್ಷೆಯಾಗಿತ್ತು. ಆದರೆ ಹೆಚ್ಚು ಜನರಿಗೆ ಇಷ್ಟದೇವತೆಯೊಂದರ ಆವಶ್ಯಕತೆ ಇದೆ ಎಂಬುದೂ ಅವರಿಗೆ ಗೊತ್ತಿತ್ತು. ಇಷ್ಟದೇವತೆಯ ಪೂಜೆಗೇನೂ ಅವರ ಅಭ್ಯಂತರವಿರಲಿಲ್ಲ—ಆದರೆ ಆ ನಿಮ್ಮ ಇಷ್ಟದೇವತೆಯೂ ನಿಮ್ಮೊಳಗಿನ ಆತ್ಮವೇ—ನೀವೇ—ಎಂಬುದನ್ನರಿಯಿರಿ ಎಂಬುದೇ ಅವರ ಕರೆ. "ಮಾನವನು ನಿರುಪಾಧಿಕ ಸತ್ಯವನ್ನು ಮನಸ್ಸಿನ ಮೂಲಕ ಗ್ರಹಿಸಬಲ್ಲ ಶ್ರೇಷ್ಠತಮ ಭಾವನೆಯೇ ಈಶ್ವರ" **(ಕೃತಿಶ್ರೇಣಿ, ೩.೧೯೦)** ಎಂದರು ಅವರು. ದೇವರು ನಿರಪೇಕ್ಷ (Absolute). ನಾವೇ ಅವನನ್ನು ಕೆಳಕ್ಕಿಳಿಸಿದವರು; ಆತನನ್ನು ಪೂಜಿಸಿ, ತೊಂದರೆಯಿಲ್ಲ; ಆದರೆ ಆತನೂ ನಿಮ್ಮ ಆತ್ಮವೇ ಎಂದು ತಿಳಿದುಕೊಳ್ಳಿ—ಎನ್ನುವ ಮೂಲಕ ಭಕ್ತಿಮಾರ್ಗದಲ್ಲಿಯೂ ಮಾನವನ ದಿವ್ಯತೆಯನ್ನೇ ಎತ್ತಿಹಿಡಿದರು.

> **ನಿಮ್ಮಲ್ಲಿರುವ ದೈವತ್ವವನ್ನು ಪ್ರಕಟಗೊಳಿಸಿ, ಪ್ರತಿಯೊಂದೂ ತಾನಾಗಿ ಅದರ ಸುತ್ತಲೂ ಸಾಮರಸ್ಯದಿಂದ ಅಣಿಯಾಗುವುದು.**
>
> —*ಸ್ವಾಮಿ ವಿವೇಕಾನಂದ*

ವಿವೇಕಾನಂದರು ಮಾನವರನ್ನು ಅವರ ಸಣ್ಣತನದಿಂದ ಮೇಲೆತ್ತಲು ಬಯಸಿದರು; ಮಿತಿಯ ಕಲ್ಪನೆಯ ಕೋಟೆಯಿಂದ ಅವರ ಅಪಾರ ವಿಶ್ವಶಕ್ತಿಯನ್ನು ಹೊರಗೆಳೆಯಲು ಯತ್ನಿಸಿದರು. ಸಣ್ಣ ದೊಡ್ಡ ಆಸೆಗಳು, ಆತಂಕ, ಭಯ, ಮತ್ಸರ, ಟೀಕೆ, ದೂರು, ತನ್ನದೇ ಹೆಗ್ಗಳಿಕೆ, ಇನ್ನೊಬ್ಬರ ಹೊಗಳಿಕೆಯನ್ನು ಬಯಸುವುದು—ಇತ್ಯಾದಿಗಳಲ್ಲಿ ಪೋಲಾಗುತ್ತಿರುವ ಮಾನವರ ಅಗಾಧ ಶಕ್ತಿಯನ್ನು ಉಳಿಸಿಕೊಂಡರೆ ಲೋಕದ ಸಮಸ್ಯೆಗಳನ್ನೆಲ್ಲ ಚಿಟಿಕೆ ಹೊಡೆಯುವಷ್ಟರಲ್ಲಿ ಪರಿಹರಿಸಿಬಿಡಬಹುದು. ಅದೇ ಶಕ್ತಿಯನ್ನು ನಿಃಸ್ವಾರ್ಥ ಕೆಲಸದಲ್ಲಿ ತೊಡಗಿಸಿಕೊಂಡರೆ, ಪ್ರಪಂಚವೇ ಪರಿವರ್ತಿತವಾಗಿಬಿಡಬಹುದು! ಅಮೆರಿಕನ್ನರ ಆಸೆಯ "ಭೂಮಿಯ ಮೇಲಣ ಸ್ವರ್ಗ" ಆಗ ನಿರ್ಮಾಣವಾದೀತು!

ಇಪ್ಪತ್ತೊಂದನೆಯ ಶತಮಾನಕ್ಕೆ ಕಾಲಿಟ್ಟಿರುವ ನಮ್ಮ ಸಮಸ್ಯೆಗಳೇನೂ ಅಪರಿಹಾರ್ಯವೆನಿಸುವುದಿಲ್ಲ. ಮಾನವ ಇನ್ನೂ ತನ್ನ ಬಾಳಿನ ಶಿಲ್ಪಿ ತಾನೇ ಆಗಿ ಉಳಿದಿದ್ದಾನೆ. ವಾತಾವರಣವಿನ್ನೂ ಪೂರ್ತಿ ವಿಷವಾಗಿಲ್ಲ; ಪ್ರಪಂಚದ ಜನಸಂಖ್ಯೆ ದೊಡ್ಡದಾಗಿದ್ದರೂ ಕೈಮೀರಿ ಹೋಗಿಲ್ಲ; ಸರ್ವನಾಶದ ಶಸ್ತ್ರಾಸ್ತ್ರಗಳಿನ್ನೂ ಹುಚ್ಚನೊಬ್ಬನ ಕೈಗೆ ಸಿಕ್ಕಿಲ್ಲ; ಭೂಮಿಯ ಶಕ್ತಿಮೂಲಗಳಿನ್ನೂ ಸಂಪೂರ್ಣವಾಗಿ ಬತ್ತಿಹೋಗಿಲ್ಲ; ಅವುಗಳನ್ನು ಬದಲಿ ಶಕ್ತಿಮೂಲಗಳಿಂದ ವೃದ್ಧಿಪಡಿಸುವ ಸಾಧ್ಯತೆ ಇದೆ. ಜಗತ್ಪ್ರಳಯ ದೂರದಿಂದ ಹೆದರಿಸುತ್ತಿದ್ದರೂ ಇನ್ನೂ ಹತ್ತಿರ ಬಂದಿಲ್ಲ. ಸಹಸ್ರಾರು ವರ್ಷಗಳಿಂದ ಕಟ್ಟಿ ಬೆಳೆಸಿದ ಸಂಸ್ಕೃತಿ ಸಾಮ್ರಾಜ್ಯವನ್ನು ಉಳಿಸಿಕೊಳ್ಳಲು ಮಾನವನಿಗೆ ಇನ್ನೂ ಕಾಲ ಮೀರಿಲ್ಲ—ಆದರೆ ಅವನು ನಿಜವಾದ ಮಾನವನಾಗಬೇಕು, ಇಲ್ಲವೇ ಸಾಯಬೇಕು ಎನಿಸುವಂಥ ಕಾಲ ಬಂದಿದೆ. ವಿವೇಕಾನಂದರೆಂದಂತೆ ಆಧ್ಯಾತ್ಮಿಕವಾಗಿ ಮುಕ್ತರಾದ ಶಕ್ತಿಶಾಲಿ ಮಾನವರು ಮಾತ್ರವೇ ಈ ಲೋಕವನ್ನು ಉಳಿಸಬಲ್ಲರು, ದಿವ್ಯವಾಗಿಸಬಲ್ಲರು. ❒